# ಕೊನೆಯ ಮಾತು!

ಅರಿವು ಸದಾ ವಿಕಾಸಶೀಲವಾದುದು. ಅದಕ್ಕೆ ನಿಲುಗಡೆಯೆಂಬುದಿಲ್ಲ. ಪ್ರಕೃತಿಯ ಮುಖ್ಯ ಗುಣ ಎಲ್ಲಿಯವರೆಗೆ ಚಲನಶೀಲವಾಗಿರುತ್ತದೋ ಅಲ್ಲಿಯವರೆಗೆ ಪರಿವರ್ತನೆಗಳು, ರೂಪಾಂತರಗಳು ಸಂಭವಿಸುತ್ತಿರುತ್ತವೆ. ಒಂದು ಕಾಲಘಟ್ಟದ ವಿದ್ಯಮಾನಗಳು ಮತ್ತೊಂದು ಕಾಲಘಟ್ಟದ ನಿರೀಕ್ಷೆಗಳನ್ನು ತೃಪ್ತಿಪಡಿಸಲು ವಿಫಲವಾಗಬಹುದು. ಆಗ ಪ್ರತಿಯೊಂದು ಕಾಲಘಟ್ಟವೂ ತನ್ನ ಅವಶ್ಯಕತೆಗೆ ತಕ್ಕುದಾದ ಬದುಕನ್ನು ಕಟ್ಟಿಕೊಳ್ಳಲು ಕ್ರಿಯಾಶೀಲವಾಗುತ್ತದೆ. ಈ ಕ್ರಿಯಾಶೀಲತೆ ಬೌದ್ಧಿಕ ಮಟ್ಟದಲ್ಲೂ ಆಗುತ್ತದೆ ಮತ್ತು ಭೌತಿಕ ಮಟ್ಟದಲ್ಲೂ ಆಗುತ್ತದೆ. ಈ ನೂತನ ಪರಿಕರಗಳು ತನ್ನ ಭೂತಕಾಲಕ್ಕೆ ಅಪರಿಚಿತ ನಾಗರಿಕ ಬೆಳವಣಿಗೆಗಳಾಗಿ ಬಿಡುತ್ತವೆ. ಇಂದು ನಾವು ಬಳಸುತ್ತಿರುವ ವಿದ್ಯುನ್ಮಾನ ಪರಿಕರಗಳು ನಮ್ಮ ಹಿಂದಿನವರಿಗೆ ಊಹಿಸಲಸಾಧ್ಯವಾದ ಸಾಧನಗಳು. ಅವರು ಕಲ್ಪನೆಗಳಲ್ಲಿ ಸೃಷ್ಟಿ ಮಾಡುತ್ತಿದ್ದ ಅನೇಕ ಅಂಶಗಳು ಇಂದು ಸಾಕಾರವಾಗಿರಬಹುದು. ಅದೂ ಒಂದು ರೀತಿಯ ವಿಕಾಸವೇ. ಕಲ್ಪನೆ ವಾಸ್ತವಕ್ಕಿಳಿದ ಸತ್ಯ! ಮಾನವನ ಬೌದ್ಧಿಕ ಸೃಜನಶೀಲತೆ ಸಾಕಾರಗೊಂಡು ಮೂರ್ತರೂಪ ತಾಳಿದ ಸಾಹಸ ಗಾಥೆ! ಜಾರ್ಜ್ ಲುಕಾಸನ ಎಪ್ಪತ್ತರ ದಶಕದ ನಭೋಮಂಡಲ ಕಾಲ್ಪನಿಕ ಸಾಹಸಗಾಥೆಗಳು ಇಂದು ಖಗೋಳ ವಿಜ್ಞಾನದ ಪ್ರಾಯೋಗಿಕ ಸತ್ಯಗಳಾಗಿ ವಾಸ್ತವವಾಗಿಬಿಟ್ಟಿವೆ. ಫ್ಯಾಂಟಸಿ ನಿಜವಾಗುವ ವಿಕಾಸಗಾಥೆಯಿದು. ಇವುಗಳಿಗೊಂದು ಕರುಳಬಳ್ಳಿಯ ಸಂಬಂಧ ವಿರುವುದನ್ನು ಗುರುತಿಸಬಹುದು. ಭೂತಕ್ಕೆ ಅಪರಿಚಿತವಾದದ್ದು ವರ್ತಮಾನದಲ್ಲಿ ಸಾಕಾರ ಸತ್ಯವಾಗಿದೆ. ಇಂದಿನ ವಾಸ್ತವ ಸತ್ಯವೂ ಅಂತಿಮವಲ್ಲವೆಂಬ, ಅದು ಮುಂದಿನ ಬೆಳವಣಿಗೆಯ ಒಂದು ಮೆಟ್ಟಿಲು ಮಾತ್ರವೆಂಬ, ಅರಿವಿನ ವಿಕಾಸಶೀಲತೆಯ ನಿರಂತರ ಸರಪಳಿಯಲ್ಲಿ ಒಂದು ಕೊಂಡಿಯೆಂಬ ಸತ್ಯ ಇದರಿಂದ ಗೋಚರವಾಗುತ್ತದೆ.

ಚರಿತ್ರೆಯ ಮಹಾನ್ ಚಿಂತಕನಾದ ಪ್ಲೇಟೋನ ಅನೇಕ ಮಾತುಗಳನ್ನು ಅವನ ನೇರ ಶಿಷ್ಯನಾದ ಅರಿಸ್ಟಾಟಲನೇ ಪ್ರಶ್ನಿಸುತ್ತಾನೆ ಮತ್ತು ಅದಕ್ಕೆ ಸಮಾನಾಂತರವಾದ ತತ್ವಗಳನ್ನು ಮಂಡಿಸುತ್ತಲೇ, ಕಲೆ–ರಾಜನೀತಿಗಳಿಗೆ ಸಂಬಂಧಿಸಿದ ಮಾತುಗಳು ಇಂದಿನವರೆಗೂ ಬೆಳೆಯುತ್ತಲೇ ಇವೆ. ಮಹಾನ್ ಕಲಾ ಚಿಂತಕನಾದ ಲಿಯೋ ಟಾಲ್‌ಸ್ಟಾಯ್‌ನ ನಾಡಿನಲ್ಲಿ ಅತ್ಯಂತ ಭಿನ್ನವಾದ ರಾಜಕೀಯ–ಆರ್ಥಿಕ ಚಿಂತನೆಗಳು ಚಿಗುರೊಡೆದು ಪ್ರಭುತ್ವ ಸ್ಥಾಪಿತವಾಯಿತು, ಅಂತಿಮವಾಗಿ ಅದೂ ನಾಶವಾಗಿ ಅಲ್ಲಿ ಮತ್ತೊಂದು ಬಗೆಯ ರಾಜಕೀಯ ಆಲೋಚನೆಗಳ ಕಾಲ ಈಗ ಪ್ರಾರಂಭವಾಗಿದೆ. ಕಬ್ಬಿಣದ ಗೋಡೆಗಳನ್ನು ಕಟ್ಟಿಕೊಂಡು ತನ್ನ ಜನರ ಬದುಕು ಮತ್ತು ಚಿಂತನೆಗಳನ್ನು ಬಂಧಿಸಿಟ್ಟಿದ್ದ ಚೀನಾದಲ್ಲಿ ಹೊಸ ಉದಾರವಾದದ ಗಾಳಿ ಬೀಸುತ್ತಿದೆ.

ನಮ್ಮ ಭರತ ಭೂಮಿಯಲ್ಲಿ ಧರ್ಮಶಾಸ್ತ್ರಗಳುಂಟು ಮಾಡಿದ್ದ ಜಾತಿ ವ್ಯವಸ್ಥೆ ಸಡಿಲವಾಗುತ್ತಿದೆ. ಅವುಗಳನ್ನು ಪ್ರಶ್ನೆ ಮಾಡಿ ವ್ಯಾಖ್ಯಾನ– ಮರು ವ್ಯಾಖ್ಯಾನ ಮಾಡಲಾಗುತ್ತಿದೆ. ಈ ಧರ್ಮಶಾಸ್ತ್ರಗಳುಂಟು ಮಾಡಿದ್ದ ಸಾಮಾಜಿಕ ರೋಗಗಳಾದ ಅಸ್ಪೃಶ್ಯತೆ, ಲಿಂಗ ತಾರತಮ್ಯ ಮುಂತಾದವುಗಳು ಈಗ ಮಂಕಾಗುತ್ತಿವೆ. ಅಂದು ಅಸ್ಪೃಶ್ಯರೆಂದು ಊರಾಚೆಗೆ ತಳ್ಳಿದ್ದ ದಲಿತರು ಇಂದು ಆಳುವ ವಿವಿಧ ಅಂಗ ಸಂಸ್ಥೆಗಳಲ್ಲಿ ಮುಖ್ಯಸ್ಥಾನಗಳಲ್ಲಿದ್ದಾರೆ. ಸದಾ ಹೊಸ್ತಿಲ ಒಳಗೆ ಇರಬೇಕಾಗಿದ್ದ ಮಹಿಳೆ ಇಂದು ಸಾಮಾಜಿಕ ಸೆರೆಯಿಂದ ಬಿಡುಗಡೆಗೊಂಡು ಅಧಿಕಾರ ನಡೆಸುವ ಹಂತಕ್ಕೆ ಬೆಳೆದಿದ್ದಾಳೆ. ಈ ಎಲ್ಲಾ ಬೆಳವಣಿಗೆಗಳು ಸಾಧ್ಯವಾದದ್ದು ಅರಿವಿನ ವಿಕಾಸದಿಂದಲೇ; ಅರಿವು ತಂದುಕೊಟ್ಟ ಮಾನವತೆಯ ಅರಳುವಿಕೆಯಿಂದಲೇ. ಅಂದರೆ ತಿಳಿವಿಗೆ ನಿಲುಗಡೆಯಿಲ್ಲ– ಅದು ನಿರಂತರ ಚಿಗುರುತ್ತಿರುವ, ಮಾನವತೆಯನ್ನು ಸಾಮರಸ್ಯಗೊಳಿಸುವ ಕಾಯಕಗಮ್ಯ ಜ್ಞಾನ.

ತಾವು ತಿಳಿದಿದ್ದೇ ಅಂತಿಮ ಸತ್ಯ, ಅದೇ ಪರಮ, ಅದನ್ನು ಎಲ್ಲರೂ ಮಾನ್ಯ ಮಾಡಬೇಕೆಂಬ ಅಹಂಕಾರ ಯಾವ ಸಿದ್ಧಾಂತಕ್ಕೂ ಇರಬಾರದು. ಇದ್ದದ್ದೇ ಆದರೆ ಅದು ಸತ್ತುಹೋಗುತ್ತದೆ. ಹೀಗೆ ಸತ್ತಂತಹ ಸಿದ್ಧಾಂತಗಳನ್ನು ಜೀವಂತವಿವೆಯೆಂದು ತಲೆಯ ಮೇಲೆ ಹೊತ್ತು ಮೆರೆಸುವ ಭ್ರಮಾಧೀನ ಅನುಯಾಯಿಗಳಿಗೆ ಕೊರತೆಯಿಲ್ಲ. ಅದನ್ನು ವರ್ತಮಾನದಲ್ಲಿ ಪುನರ್ ಸ್ಥಾಪಿಸ ಹೊರಡುವ ಹುಚ್ಚುತನಕ್ಕೆ ಇಳಿಯುವವರು ಅನೇಕ. ಅಂಥವರಿಂದಲೇ ಇಂದು ಜಗತ್ತಿನಲ್ಲಿ ಮೂಲಭೂತವಾದದ ಆಧಾರದ ಮೇಲೆ ಭಯೋತ್ಪಾದನೆಗಳು ನಡೆಯುತ್ತಿರುವುದು. ವರ್ತಮಾನ ಕಾಲದ ಜನರು ಹಳೆಯದನ್ನು ನಿರಾಕರಿಸಿ; ಅದರಲ್ಲಿ ಒಳ್ಳೆಯದಿದ್ದಲ್ಲಿ ಅದನ್ನು ಪರಿಷ್ಕರಿಸಿ, ರೂಪಾಂತರಿಸಿ, ಬೇರೆ ಬೇರೆ ಆಕಾರ ರೂಪ ವಿನ್ಯಾಸಗಳಲ್ಲಿ ಪಡಿಮೂಡಿಸಿ ಪ್ರಸ್ತುತಗೊಳಿಸಿಕೊಂಡು ಅನುಕರಿಸುತ್ತಿರುತ್ತಾರೆ. ಅದರಲ್ಲಿ ವರ್ತಮಾನದ ಬದುಕಿನ ಅವಶ್ಯಕತೆ ಮತ್ತು ಸರ್ವಮಾನ್ಯ ಸಮಾನತೆಯ ಅಂಶ ಪ್ರಧಾನವಾಗಿ ಕೆಲಸ ಮಾಡುತ್ತಿರುತ್ತದೆ. ಆದರೆ ಮೂಲಭೂತವಾದಿಗಳು ಯಾವುದೋ ಕಾಲದ ಅಗತ್ಯತೆಗಳಿಗೆ ತಕ್ಕಂತೆ ರೂಪಿತಗೊಂಡಿದ್ದ, ಇಂದು ಅಪ್ರಸ್ತುತವೂ ಅವೈಜ್ಞಾನಿಕವೂ, ಅಮಾನವೀಯವೂ ಆದ ತತ್ವ ಸಿದ್ಧಾಂತಗಳನ್ನು ಇಂದಿನ ಜನಾಂಗದ ಮೇಲೆ ಭಯದ ಮೂಲಕ ಒಪ್ಪಿಸುವ ಕೆಲಸಕ್ಕಿಳಿಯುವುದು ಕಾರ್ಯಸಾಧುವಾದ ಕೆಲಸವಲ್ಲ. ಏಕೆಂದರೆ– ಯಾವುದೇ ಸಿದ್ಧಾಂತವನ್ನು ಯಾರ ತಲೆಯ ಮೇಲೂ ಭ್ರಮೆ ಮೂಡಿಸಿ ಹೇರಲು ಸಾಧ್ಯವಿಲ್ಲವೆಂಬ ಸತ್ಯವನ್ನು ಚರಿತ್ರೆಯೇ ನಮಗೆ ತಿಳಿಸಿಕೊಟ್ಟಿದೆ. ಅತ್ಯಂತ ಕ್ರಾಂತಿಕಾರಿಯಂತೆ ಕಂಡು ಬಂದ ಮಾರ್ಕ್ಸ್‌ನೇ ಇಂದು ಅಪ್ರಸ್ತುತವೆಂಬಂತೆ ತೋರುತ್ತಿರುವ ಕಾಲದಲ್ಲಿ ಧಾರ್ಮಿಕ ಮೂಲಭೂತವಾದ ವಿಜೃಂಭಿಸಲು ಸಾಧ್ಯವೆ? ಏಕೆಂದರೆ– ತಿಳಿವಿಗೆ ಪ್ರಾರಂಭ ಮಾತ್ರ ಉಂಟು. ಅದಕ್ಕೆ ನಡೆಯಿದೆ, ನಿಲುಗಡೆಯಿಲ್ಲ.

■ ಶಿಕಾಕು

# ಮಾತೇ ಮುತ್ತು

★ ಮನುಷ್ಯನನ್ನು ಶ್ರೇಯಸ್ಸಿಗೆ ಏರಿಸುವುದು ಅವನು ಮಾಡಿದ್ದಲ್ಲ; ಮಾಡಬೇಕೆಂದು ಬಯಸಿದ್ದು.
-ರಾಬರ್ಟ್ ಬ್ರೌನಿಂಗ್

★ ಪ್ರಯತ್ನಿಸುವವರೆಗೂ ತಾನೇನು ಮಾಡಬಲ್ಲೆ ಎಂಬುದು ಯಾರಿಗೂ ತಿಳಿದಿರುವುದಿಲ್ಲ.
-ಪಿ.ಸೈರಸ್

★ ಶಕ್ತಿ ಮೀರಿ ಮಾಡುವುದು, ಸಾಧ್ಯವಾದದ್ದೆಲ್ಲವನ್ನೂ ಮಾಡದೇ ಇರುವಷ್ಟೇ ಕೆಟ್ಟದ್ದು.
-ಕನ್‌ಫ್ಯೂಷಿಯಸ್

★ ಯಾರು ಜೀವನದಲ್ಲಿ ಚಾರಿತ್ರ್ಯವನ್ನು ಪಡೆದಿದ್ದಾರೋ ಅವರು ಭಗವಂತನಿಗೆ ಶ್ರೇಷ್ಠ ಎನಿಸುತ್ತಾರೆಯೇ ಹೊರತು, ವರ್ಣಾಶ್ರಮದ ಹಿನ್ನೆಲೆಯಲ್ಲಿ ಶ್ರೇಷ್ಠ ಎನಿಸುವುದಿಲ್ಲ.
-ಪೇಜಾವರ ವಿಶ್ವೇಶತೀರ್ಥ ಸ್ವಾಮೀಜಿ

★ ಅವನು ವೇದಾಂತಿಯಂತೆ ಯೋಚಿಸುತ್ತಾನೆ; ದೊರೆಯಂತೆ ಮಾಡುತ್ತಾನೆ.
-ರೂಸೋ

★ ಏನನ್ನೂ ಮಾಡದವನೇ ತಪ್ಪು ಮಾಡುವವನು.
-ಫ್ರೆಂಚ್ ಗಾದೆ

★ ಯಾರನ್ನೋ ಮೆಚ್ಚಿಸಲಿಕ್ಕೆ ಚಿತ್ರ ರಚಿಸಲು ತೊಡಗಿದವನು, ಯಾರನ್ನೂ ಮೆಚ್ಚಿಸಲಾರ.
-ಆರ್.ಎಂ.ಹಡಪದ

★ ಮಾಡದಿರು ಬಾಳನ್ನು ಬೇಳೆಯಂತೆ; ಕೂಡಿರಲಿ ಬಾಳು ಇಡಿಗಾಳಿನಂತೆ.
-ದ.ರಾ.ಬೇಂದ್ರೆ

★ ತ್ಯಾಗವೇ ಒಲುಮೆ; ಬಾಳ್ವೆಯ ಕುಲುಮೆ.
-ಪು.ತಿ.ನ.

★ ಕಲಾಸೇವೆಗಾಗಿ ಜೀವನವನ್ನು ಧಾರೆ ಎರೆಯುವ ಕಲಾವಿದರ ಭಾವಾವೇಶಕ್ಕೆ, ಧ್ವನಿಗೆ, ಪಾತ್ರಕ್ಕೆ ಮುಪ್ಪು ಬರುವುದಿಲ್ಲ.
-ಮಳವಳ್ಳಿ ಸುಂದರಮ್ಮ

★ ಭಾಷೆ ನಮ್ಮ ಪಾಲಿಗೆ ಬಂದ ವರ.
-ಹಾ.ಮಾ.ನಾಯಕ

★ ಎಲ್ಲರೂ ನಮ್ಮ ಬಗ್ಗೆ ಮಾತನಾಡುವುದಕ್ಕಿಂತ ಕೆಟ್ಟದ್ದೆಂದರೆ, ಯಾರೂ ನಮ್ಮ ಬಗ್ಗೆ ಮಾತನಾಡದೇ ಇರುವುದು.
-ಆಸ್ಕರ್ ವೈಲ್ಡ್

★ ಒಂದು ಒಳ್ಳೆಯ ಮಾತು ಚಳಿಗಾಲದ ಮೂರು ತಿಂಗಳನ್ನು 'ಬೆಚ್ಚಗೆ' ಮಾಡುತ್ತದೆ.
-ಜಪಾನಿ ಗಾದೆ